ಆ) ಹೌದು,

ಇ) ಉದ್ಭವಿಸುವುದಿಲ್ಲ.

ಈ)ಉದ್ಭವಿಸುವುದಿಲ್ಲ.

ಸಂಸ್ಕರಣ ಮತ್ತು ಮಾರಾಟ ಸಹಕಾರ ಸಂಘಗಳಿಗೆ ನೀಡುವ ಸಾಲ

೨೪೫. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ಸಂಸ್ಕರಣ ಮಂತ್ತು ಮಾರಾಟ ಸಹಕಾರ ಸಂಘಗಳಿಗೆ ನೀಡುವ ಮುಂಗಡಗಳ ಸಂಬಂಧದಲ್ಲಿ ರಾಜ್ಯ ಸರ್ಕಾರದ ನೀತಿ ಏನು ?

ಆ) ಪ್ರತೀ ಸಾಲ ಮೊಬಲಗಿನಲ್ಲಿ ಅದರ ಶೇಕಡ ೨ರಷ್ಟನ್ನು ಷೇರಿನ ಬಾಬ್ತು ಕಟಾಯಿಸಿ ಕೊಳ್ಳುವ ಅಂಶ ನಿಜವೆ ?

ಇ) ಹಾಗಿದ್ದಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಅಷ್ಟೇ ಮೊಬಲಗನ್ನು ಅಪೆಕ್ಸ್ ಬ್ಯಾಂಕಿನಲ್ಲಿ ಷೇರಿನ ಬಾಬ್ತು ಜಮಾ ಮಾಡುತ್ತಿವೆಯೇ?

ಈ) ಈ ನೀತಿಯು ಸಂಸ್ಥೆಗಳ ಹಣಕಾಸು ಸ್ಥಿರತೆಯ ಮೇಲೆ ಪರಿಣಾಮ ಬೀರುವುದಿಲ್ಲವೆ ? ಹಾಗಿದ್ದಲ್ಲಿ ಈ ಸಂಬಂಧದಲ್ಲಿ ಸರ್ಕಾರ ತೆಗೆದುಕೊಳ್ಳಬೇಕೆಂದಿರುವ ಕ್ರಮಗಳೇನು ?

ಶ್ರೀ ಹೆಚ್. ವಿಶ್ವಾನಾಥಯ್ಯ (ಸಹಕಾರ ಮಂತ್ರಿಗಳು).—

ಅ) ಸಂಸ್ಕರಣ ಸಹಕಾರ ಸಂಘ ಮತ್ತು ಮಾರಾಟ ಸಹಕಾರ ಸಂಘಗಳಿಗೆ ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಿಂದ ನೀಡುವ ನಗದು ಸಾಲ ಸೌಲಭ್ಯವು ನಬಾರ್ಡ್‌ನವರು ಕಾಲಕಾಲಕ್ಕೆ ನೀಡುವ ನಿರ್ದೇಶನ ನೀತಿಗೆ ಒಳಪಡುವುದರಿಂದ ಈ ಬಗ್ಗೆ ರಾಜ್ಯ ಸರ್ಕಾರವು ಯಾವುದೇ ನೀತಿ ನಿಯಮಾವಳಿಯನ್ನು ವಿಧಿಸಿಲ್ಲ.

ಆ) ಹೌದು.

ಇ) ಜಿಲ್ಲಾ ಕೇಂದ್ರ ಬ್ಯಾಂಕುಗಳು ಶೇಕಡ ೧ರಷ್ಟನ್ನು ಷೇರು ಮಂತಿಗೆ ಎಂದು ಅಪೆಕ್ಸ್ ಬ್ಯಾಂಕಿಗೆ ಜಮಾ ಮಾಡುತ್ತಿವೆ.

ಈ) ಈ ವಿಷಯ ಕುರಿತು ನಬಾರ್ಡ್‌ದೊಡನೆ ಸಮಾಲೋಚಿಸಿ ಕ್ರಮ ಕೈಗೊಳ್ಳುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಭೂ ಸುಧಾರಣೆ ಕಾಯಿದೆ

೨೪೭. ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭೂ ಸುಧಾರಣೆ ಕಾಯಿದೆ ಜಾರಿಗೆ ಬಂದನಂತರ ಸರ್ಕಾರದ ವಶಕ್ಕೆ ಬಂದ ಒಟ್ಟು ಭೂಮಿ ಎಷ್ಟು ? ಮತ್ತು ಈ ಪೈಕಿ ಭೂ ರಹಿತರಿಗೆ ಹಂಚಿದ ವಿಸ್ತೀರ್ಣ ಎಷ್ಟು ?

ಆ) ಕಾನೂನಿನ ಕಟ್ಟಳೆಗಳಿಂದ ಜಾರಿಗೊಳ್ಳುವ ದೃಷ್ಟಿಯಿಂದ ಭೂ ಮಾಲೀಕರು ತಮ್ಮ ವಾಸ್ತವ ಹಿಡುವಳಿಯನ್ನು ಮುಚ್ಚಿಟ್ಟು ಸುಳ್ಳು ಘೋಷಣಾ ಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?